5244(5962) ಶ್ರೀ ದೇವೇಗೌಡ. ಜಿ.ಟಿ. (ಹುಣಸೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಕೃತಿ ವಿಕೋಪದಿಂದ ಮರಣಕ್ಕೀಡಾದವರಿಗೆ ಜಿಲ್ಲಾಡಳಿತದಿಂದ ಕೇವಲ 50,000.00 ರೂ. ಗಳನ್ನು ಪರಿಹಾರ ನೀಡುತ್ತಿರುವುದು ನಿಜವೇ ;

ಆ) ಬೇರೆ ಇಲಾಕೆಗಳಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಮರಣಕ್ಕೀಡಾದವರಿಗೆ 1,00,000.00 ರೂ.ಗಳ ಪರಿಹಾರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಪ್ರಕೃತಿ ವಿಕೋಪದಿಂದ ಮರಣಕ್ಕೀಡಾದವರಿಗೆ ಹಾಲಿಯಿರುವ ಮೊಬಲಗನ್ನು ದ್ವಿಗುಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಇದನ್ನು ಯಾವಾಗಿನಿಂದ ಜಾರಿಗೆ ತರಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು, (ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ) .

ಆ) ಹೌದು.

ಇ) ಇದನ್ನು ಕೇಂದ್ರ ಸರ್ಕಾರವೇ ಹೆಚ್ಚಿಸ ಬೇಕಾಗುತ್ತದೆ.

ಈ) ಉದ್ಭವಿಸುವುದಿಲ್ಲ.

5245(6030) ಶ್ರೀ ಧರ್ಮಗೌಡ ಎಸ್.ಎಲ್ (ಬೀರೂರು) ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆ ತತ್ಕೊಳ, ಸಾಗರಗೋಡು ಮುಂತಾದ ಕಡೆ ಹಲವಾರು ವರ್ಷಗಳಿಂದ ಒತ್ತುವರಿಯಾಗಿದ್ದ ಅರಣ್ಯ ಭೂಮಿಯನ್ನು ಅದು ಮೀಸಲು ಅರಣ್ಯ ಎಂಬ ಕಾರಣದಿಂದಾಗಿ ಆ ಒತ್ತುವರಿದಾರರನ್ನು ತೆರವುಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಆ) ತೆರವುಗೊಳಿಸುವುದೇ ಆದಲ್ಲಿ ಅವರ ಪುನರ್ವಸತಿಗಾಗಿ ಯಾವ ಯೋಜನೆಯನ್ನು ರೂಪಿಸಲಾಗಿದೆ.

ಇ) ಯೋಜನೆಯನ್ನು ರೂಪಿಸಿದ್ದಲ್ಲಿ ಅದರ ಸ್ವರೂಪವೇನು ಹಾಗೂ ಅದನ್ನು ಅನುಷ್ಠಾನಗೊಳಿಸುವುದು ಯಾವಾಗ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) ಸರ್ವೋಚ್ಚ ನ್ಯಾಯಾಲಯದ ಆದೇಶ ಹಾಗೂ ಕೇಂದ್ರ ಸರ್ಕಾರದ ಸೂಚನೆಗಳನ್ನು ದಿನಾಂಕ : 25-10-1980ರ ನಂತರ ಮೀಸಲು ಅರಣ್ಯದಲ್ಲಿ ಒತ್ತುವರಿಯಾದ ಪ್ರದೇಶದಿಂದ ಒತ್ತುವರಿಯನ್ನು ತೆರವುಗೊಳಿಸಬೇಕಾಗಿದೆ. ದಿನಾಂಕ : 25-10-1980ರ ಪೂರ್ವದಿಂದ ಒತ್ತುವರಿಯಾಗಿರುವ ಪ್ರದೇಶವನ್ನು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗ್ಗುವುದು.

ಆ) ತತ್ಕೊಳ ಮೀಸಲು ಅರಣ್ಯದಲ್ಲಿನ ಅತಿಕ್ರಮಣ ತೆರವುಗೊಳಿಸಿದುದರಿಂದ ನಿರಾಶ್ರಿತರಾದ ಅರ್ಹ ಬಡ ಮತ್ತು ವಸತಿಹೀನ ಅತಿಕ್ರಮಣದಾರರಿಗೆ ಸರ್ಕಾರವು ಪುನರ್ವಸತಿ ಯೋಜನೆ ಅಡಿಯಲ್ಲಿ ಮನೆ ನಿರ್ಮಿಸಿ ಹಂಚಲಾಗಿದೆ. ಹಾಗೂ ಸಾರಗೋಡು ಮತ್ತು ಮೆಸ್ಕಲಿ ಮೀಸಲು ಅರಣ್ಯದಿಂದ ತೆರವುಗೊಳಿಸಲಾಗುವ ಅತಿಕ್ರಮಣದಾರರಿಗೆ ಮನೆ ಕಟ್ಟಿಸಲು ಮತ್ತು ಇತರೆ ಸಹಾಯ ನೀಡುವ ಯೋಜನೆ ಇದೆ.